

ಮಲಗಿದ್ದ ಕೆರೆಗೊಡ್ಡ ಹಾವೊಂದು ಸರಸರ ಬಲದಿಂದ ಎಡಕ್ಕೆ ಹಾದುಹೋಯಿತು. ಅಂಬವ್ವ ಚೌಡವ್ವಳ ಮಹಿಮೆಯಂತೆ ಭಾವಿಸಿಕೊಂಡು 'ಅವ್ವಾ ನಮ್ಮವ್ವಾ ನೀನ ಕಾಪಾಡಬೇಕು' ಎಂದು ಬೇಡಿಕೊಳ್ಳುತ್ತಾ ಕಣ್ಣು ಮುಚ್ಚಿಕೊಂಡಳು. ಹಾವು ಭಯದಿಂದ ವೇಗದಲ್ಲಿ ಹೋಯಿತು. ಬನ್ನಿಮರದ ಬುಡಕ್ಕೆ ನೀರೆರೆದು, ಅರಿಶಿನ ಕುಂಕುಮ ಹಚ್ಚಿ, ಊದಿನಕಡ್ಡಿ ಬೆಳಗಿ, 'ಅವ್ವಾ ನೀನಾ ದಾರಿ ತೋರಿಸ್ಬಕು. ನಮಗೆ ಯಾರದಾರ ಈ ಬಡೂರಿಗೆ ನೀನ ದಿಕ್ಕು. ದನಾ ಕಳಿಸಿ ಕೊಡವಾ ನಿನಗೆ ಸೀರಿ ಹಣ್ಣು ಕಾಯಿ ಮಾಡತೀನಿ' ಅಂತಾ ಹರಕೆ ಬೇಡಿಕೊಂಡು ಬಂದಳು.

'ಕೈ ತೊಕ್ಕರೆಣ್ಣಾ ಗಂಗಾಳ ಇಡತನಿ' ಅಂತ ಅಂಬವ್ವ ಬುತ್ತಿ ಗಂಟಿಗೆ ಕೈ ಹಚ್ಚಿದಳು. 'ಏನ್ ಬ್ಯಾಡವಾ ಹೊಕನಿ, ಮನ್ಯಾಗ ಗೌಡತಿ ಕಾಯ್ತುರ್ತಾಳ' ಅಂತ ನಾಗನಗೌಡ್ರು ಜಾಗ ಕಿತ್ತು ಟವಲ್ ಜಾಡಿಸಿದರು. ಬೀರಪ್ಪ, ಸಿದ್ದಪ್ಪ ಮೇಲೆದ್ದು ಬಾರಣಾ ಕೈ ತೊಳಕಬಾ' ಎಂದು ನಿಂಗಪ್ಪನನ್ನು ಎಬ್ಬಿಸಿದರು. ದನಗಳಿಗೆ ನೀರು ಕುಡಿಸುವ ಬಾನಿಯಿಂದ ನೀರು ತುಂಬಿಕೊಂಡು, ಬೀರಪ್ಪ ಸಿದ್ದಪ್ಪ ಸೀನು ಕೈಕಾಲು ತೊಳೆದುಕೊಂಡರು. ನಿಂಗಪ್ಪ ಬಾನಿಯಲ್ಲಿ ತೇಲಾಡುತಿದ್ದ ಚೊಂಬಿಗೆ ಕೈಹಾಕಲು ಬಾಗಿದ. ಆಕಳು ಅಂಬೋ ಎಂದು ಅರಚುತಿತ್ತು. ಜೋಡೆತ್ತುಗಳೆರಡು ಕಾಲು ಒಳಕ್ಕೆ ಮಾಡಿ ಮೇವಿಲ್ಲದೆ ಮಲಗಿ ಬಾಯಾಡಿಸುವ ಚಿತ್ರಣ ನೀರಿನಲ್ಲಿ ಮೂಡಿದಂತಾಯಿತು. ನಿಂಗಪ್ಪನಿಗೆ ಎರಡು ಹನಿ